**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ : ಆಆಶಾ:ಹೆ.ಶಿ.ದೂ:2019-20 ದಿನಾಂಕ : 29.06.2019

## ಟಿಪ್ಪಣಿ

ಸರ್ಕಾರಿ ಪ್ರೌಢ ಶಾಲೆ, ಜೀವನ್‌ಭೀಮಾನಗರ, ಪಿ.ಸಿ.ಎಂ. ಶಿಕ್ಷಕರ ಹೆಚ್ಚುವರಿ ಪ್ರಕ್ರಿಯೆಯನ್ನು ತಪ್ಪು ಮಾಹಿತಿ ಎಂದು, ನೊಂದ ಶಿಕ್ಷಕರಿಗೆ ವಿನಾಯಿತಿ ನೀಡಿದ ಬಗ್ಗೆ ದೂರುಗಳು ಸ್ವೀಕೃತವಾಗಿರುತ್ತದೆ. ಶಿಕ್ಷಕಿಯವರ ಪತಿ ಸರ್ಕಾರಿ ನೌಕರರಲ್ಲದೇ ಇದ್ದರೂ ಕೂಡ ಅವರಿಗೆ ಪತಿ/ಪತ್ನಿ ಪ್ರಕರಣವೆಂದು ಪರಿಗಣಿಸಿದೆ ಎಂದು ದೂರಿನ ಮುಖ್ಯಾಂಶ. ಇದೇ ರೀತಿ ಇನ್ನೂ ಕೆಲವು ಪ್ರಕರಣಗಳು ಇದೆ ಎಂದು ದೂರುಗಳು ಬಂದಿವೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಈ ಕೆಳಕಂಡಂತೆ ಕ್ರಮ ವಹಿಸಿಸುವುದು.

1. ಸದರಿ ಪ್ರಕರಣವನ್ನು ವಿವರವಾಗಿ ಪರಿಶೀಲಿಸಿ ಅವರ ದೂರಿನ ಸತ್ಯಾಂಶವನ್ನು ತಿಳಿದುಕೊಳ್ಳುವುದು. ಸದರಿ ಶಿಕ್ಷಕಿಯವರು ಯಾವುದಾದರೂ ಸುಳ್ಳು ದಾಖಲೆ ಸಲ್ಲಿಸಿ, ವಿನಾಯಿತಿ ಪಡೆದಿದ್ದಾರೆ ಎಂದು ಕಂಡು ಬಂದರೆ, ವಿನಾಯಿತಿ ರದ್ದುಪಡಿಸುವುದು.
2. ಇದೇ ರೀತಿಯಲ್ಲಿ ಯಾವುದಾದರೂ ಪ್ರಕರಣ ಕಂಡು ಬಂದಲ್ಲಿ ಎಲ್ಲಾ ವಿನಾಯಿತಿಗಳನ್ನು ರದ್ದುಪಡಿಸುವುದು, ಹಾಗೂ ಸದರಿ ಶಿಕ್ಷಕರಿಗೆ ಕಡ್ಡಾಯವಾಗಿ ಸ್ಥಳ ನಿಯುಕ್ತಿಗೊಳಿಸುವುದು.
3. ಇತರೆ ತಪ್ಪು ಮಾಹಿತಿ ದಾಖಲೆಗಳನ್ನು ನೀಡಿದ ಶಿಕ್ಷಕರು ಹಾಗೂ ಅದನ್ನು ಸ್ವೀಕರಿಸಿ ದೃಢೀಕರಿಸಿದ ಇಲಾಖೆಯ ಅಧಿಕಾರಿ / ಸಿಬ್ಬಂದಿ ವರ್ಗದವರ ಮೇಲೆ ಕ್ರಿಮಿನಲ್ ದೂರು ದಾಖಲಿಸುವುದು.
4. ಸದರಿ ಅಧಿಕಾರಿ / ಸಿಬ್ಬಂದಿ / ಶಿಕ್ಷಕರ ಮೇಲೆ ಶಿಸ್ತು ಕ್ರಮಕ್ಕೆ ಕ್ರಮ ಕೈಗೊಳ್ಳುವುದು.

(ಡಾ|| ಪಿ.ಸಿ. ಜಾಫರ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ :**

1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
2) ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ :**

1) ಜಂಟಿ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು